ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು-560009

ಸಂಖ್ಯೆ: ಡಿ.ಡಿ/ಪಿ.ಸಿ & ಪಿ.ಎನ್.ಡಿ.ಟಿ/12/2013-14 ದಿನಾಂಕ: -06-2013

## :: ನೋಟೀಸ್ ::

ವಿಷಯ: ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ಹಚ್ಚುವ ತಂತ್ರಗಳು (ಪಿ.ಸಿ & ಪಿ.ಎನ್.ಡಿ.ಟಿ) (ಲಿಂಗ ಆಯ್ಕೆ ನಿಷೇಧ) ಕಾಯ್ದೆ 1994 ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವ ಬಗ್ಗೆ.

* * * *

ತಮ್ಮ ಸಂಸ್ಥೆ/ಆಸ್ಪತ್ರೆಗೆ ದಿನಾಂಕ:____________________ರಂದು ಪಿ.ಸಿ. ಮತ್ತು ಪಿ.ಎನ್.ಡಿ.ಟಿ. ಕಾರ್ಯಕ್ರಮದ ಪರಿಶೀಲನೆಗಾಗಿ National Inspection and Monitoring Committee (NIMC), New Delhi ಅನಿರೀಕ್ಷಿತ ಭೇಟಿ ನೀಡಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತವೆ. ಈ ಬಗ್ಗೆ ತಾವು ವೈಯಕ್ತಿಕವಾಗಿ ಗಮನಹರಿಸಿ ಈ ಪತ್ರ ತಲುಪಿದ ಒಂದು ವಾರದೊಳಗಾಗಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಕೈಗೊಂಡ ಕ್ರಮದ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ತಪ್ಪಿದಲ್ಲಿ ಪಿ.ಸಿ ಮತ್ತು ಪಿ.ಎನ್.ಡಿ.ಟಿ. ಕಾಯ್ದೆಯನ್ವಯ ಕ್ರಮ ವಹಿಸಲಾಗುವುದು.

**ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ಹಚ್ಚುವ ತಂತ್ರಗಳು (ಪಿ.ಸಿ & ಪಿ.ಎನ್.ಡಿ.ಟಿ) (ಲಿಂಗ ಆಯ್ಕೆ ನಿಷೇಧ) ಕಾಯ್ದೆ 1994 ಅನ್ವಯ ಈ ಕೆಳಕಂಡ ಆಕ್ಷೇಪಣೆಗಳಿಗೆ ಸಮರ್ಪಕ ಸಮಜಾಯಿಷಿಯನ್ನು ನೀಡುವುದು.**

1) ನೀವು ಗರ್ಭಾವಸ್ಥೆಯಲ್ಲಿ ಲಿಂಗ ಪತ್ತೆಗೆ ಪ್ರೋತ್ಸಾಹಿಸುತ್ತಿರುವುದಾಗಿ ಗುಮಾನಿ ಇರುತ್ತದೆ.
2) ನೀವು ತೋರಿಸಿದ ಸ್ಕ್ಯಾನಿಂಗ್ ಕೊಠಡಿಯಲ್ಲಿ ಲಿಂಗ ಪತ್ತೆ ನಿಷೇಧದ ಬಗ್ಗೆ ಕಾನೂನಿನನ್ವಯ (statutary waring) ಬೋರ್ಡುಗಳನ್ನು ಪ್ರದರ್ಶಿಸಿರುವುದಿಲ್ಲ (display)
3) ಸ್ಕ್ಯಾನಿಂಗ್ ಕೊಠಡಿಯಲ್ಲಿ ಪಿ.ಸಿ. ಮತ್ತು ಪಿ.ಎನ್.ಡಿ.ಟಿ ಕಾಯ್ದೆಯ ಪುಸ್ತಕ ಇಟ್ಟಿರುವುದಿಲ್ಲ.
4) ಈ ಕಾಯ್ದೆಯ ಸೆಕ್ಷನ್ 29ರ ಅನ್ವಯ ದಾಖಲಾತಿಗಳು ಕ್ರಮಬದ್ಧವಾಗಿರುವುದಿಲ್ಲ.
5) ಅಲ್ಟ್ರಾಸೌಂಡ್ ಸ್ಕ್ಯಾನಂಗ್ ಸೌಲಭ್ಯ ಒದಗಿಸುವ ಕೊಠಡಿಯನ್ನು ಪದೇ ಪದೇ ಬದಲಾಯಿಸಿರುವುದು ಕಂಡು ಬಂದಿರುತ್ತದೆ.
6) ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ನೊಂದಣೆ ಪ್ರಮಾಣ ಪತ್ರದ (Registration) ಮೂಲ ಪ್ರತಿಯನ್ನು ಪ್ರದರ್ಶಿಸಿರುವುದಿಲ್ಲ.
7) ಈ ಕಾಯ್ದೆಯ ಸೆಕ್ಷನ್ 5ರ ಅನ್ವಯ ಫಾರಂ F/G ನಲ್ಲಿ ವೈದ್ಯರ/ಗರ್ಭಿಣಿಯ ಸಹಿ ಇರುವುದಿಲ್ಲ ಹಾಗೂ ಸ್ಕ್ಯಾನಿಂಗ್ ವರದಿಯಲ್ಲಿ ಭ್ರೂಣ ಲಿಂಗ ಪತ್ತೆ ಮಾಡುವುದಿಲ್ಲ ಎಂಬುವುದನ್ನು ಮುದ್ರಣ/ನಮೂದಿಸಿರುವುದಿಲ್ಲ.
8) ಸೆಕ್ಷನ್ 29 (2) ಮತ್ತು ರೂಲ್ 9(8) ರ ಅನ್ವಯ ಸಕ್ಷಮ ಪ್ರಾಧಿಕಾರಿಗಳಿಗೆ ಮಾಸಿಕ ವರದಿ ನೀಡಿದ ಬಗ್ಗೆ ಮಾಹಿತಿ ಹಾಜರುಪಡಿಸಿರುವುದಿಲ್ಲ.

9) ಈ ಹಿಂದೆ ನೀಡಿದ ಕಾರಣ ಕೇಳಿ ನೋಟೀಸಿಗೆ ಉತ್ತರ ನೀಡಿರುವುದಿಲ್ಲ.

10) ಗರ್ಭಪೂರ್ವ /ಪ್ರಸವಪೂರ್ವ ಭ್ರೂಣಲಿಂಗ ಆಯ್ಕೆ ಬಗ್ಗೆ ನೀವು ಸಲಹೆ ನೀಡಿರುವುದಾಗಿ ತಿಳಿದುಬಂದಿರುತ್ತದೆ.

11) ಸ್ಕ್ಯಾನಿಂಗ್ ಮಾಡುವ ವೈದ್ಯರ ಕೆ.ಎಂ.ಸಿ. ನೊಂದಣಿ ಪ್ರಪತ್ರ ಹಾಜರು ಪಡಿಸಿರುವುದಿಲ್ಲ ಹಾಗೂ ಸ್ಕ್ಯಾನಿಂಗ್ ತರಬೇತಿ ಪ್ರಮಾಣ ಪತ್ರ ಇರುವುದಿಲ್ಲ.

12) SONOLOGISTS ಅಲ್ಲದೇ ಬೇರೆಯವರಿಂದ ಸ್ಕ್ಯಾನಿಂಗ್ ಮಾಡಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ.

13) ರೂಲ್ 13ರ ಅನ್ವಯ ಸ್ಕ್ಯಾನಿಂಗ್ ಮಾಡಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ.

14) ನೊಂದಣಿ ನವೀಕರಿಸಿರುವುದಿಲ್ಲ.

**ವೈದ್ಯಕೀಯ ಗರ್ಭಪಾತ ಕಾಯ್ದೆ 1971 () ರ ಕರ್ನಾಟಕ ಸರ್ಕಾರದ ನಿಯಮ 2003ರ ಅನ್ವಯ ಈ ಕೆಳಕಂಡ ಆಕ್ಷೇಪಣೆಗಳಿಗೆ ಸಮರ್ಪಕ ಸಮಜಾಯಿಷಿಯನ್ನು ನೀಡುವುದು:-**

1) ವೈದ್ಯಕೀಯ ಗರ್ಭಪಾತ ಕಾಯ್ದೆ 1971 ರ ಅನ್ವಯ ದಾಖಲಾತಿಗಳು/ಕೇಸು ಶೀಟುಗಳು ಕ್ರಮಬದ್ಧವಾಗಿರುವುದಿಲ್ಲ ಹಾಗೂ ಪರಿಶೀಲಿನಾ ಸಮಯದಲ್ಲಿ ಹಾಜರು ಪಡಿಸಿರುವುದಿಲ್ಲ.

2) ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ನೊಂದಣಿ ಪ್ರಮಾಣ ಪತ್ರದ (REGISTRATION) ಮೂಲ ಪ್ರತಿಯನ್ನು ಪ್ರದರ್ಶಿಸಿರುವುದಿಲ್ಲ.

3) ಈ ಕಾಯ್ದೆಯ ಅನ್ವಯ ಒಪ್ಪಿಗೆ ಪತ್ರದಲ್ಲಿ/ಫಾರಂನಲ್ಲಿ ಗರ್ಭಪಾತ ಮಾಡಿಸಿಕೊಳ್ಳುವ ಕಾರಣದ ಬಗ್ಗೆ ಗರ್ಭಿಣಿಯ ಸಹಿ ಇರುವುದಿಲ್ಲ.

4) ಸಕ್ಷಮ ಪ್ರಾಧಿಕಾರಿಗಳಿಗೆ ಮಾಸಿಕ ವರದಿ ನೀಡಿದ ಬಗ್ಗೆ ಮಾಹಿತಿ ಹಾಜರುಪಡಿಸಿರುವುದಿಲ್ಲ.

5) ಈ ಹಿಂದೆ ನೀಡಿದ ಕಾರಣ ಕೇಳಿ ನೋಟೀಸಿಗೆ ಉತ್ತರ ನೀಡಿರುವುದಿಲ್ಲ.

6) ವೈದ್ಯಕೀಯ ಗರ್ಭಪಾತ ಮಾಡುವ ವೈದ್ಯರ (ಸ್ತ್ರೀ ರೋಗ ಪ್ರಸೂತಿ ತಜ್ಞರ) ಕೆ.ಎಂ.ಸಿ. ನೊಂದಣಿ ಪ್ರ.ಪತ್ರ ಹಾಜರು ಪಡಿಸಿರುವುದಿಲ್ಲ. ಹಾಗೂ ವೈದ್ಯಕೀಯ ಗರ್ಭಪಾತ ಮಾಡಲು ತರಬೇತಿ ಪಡೆದ ಬಗ್ಗೆ ಪ್ರಮಾಣ ಪತ್ರ ಇರುವುದಿಲ್ಲ.

7) ನೊಂದಣಿ ನವೀಕರಿಸಿರುವುದಿಲ್ಲ.

8) ಇತರೇ